


International Journal of Kannada Research
www.kannadajournal.com

ISSN: 2454–5813
IJKR 2021; 7(4): 127-130
© 2021 IJKR
www.kannadajournal.com
Received: 10-06-2021
Accepted: 25-08-2021

**ರಶ್ಮಿ ಎ.ಎಸ್**
ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಸಶಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ,

**ಡಾ. ಎಸ್. ಜಿ. ಚಲವಾದಿ**
ಪ್ರೊಫೆಸರ್, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ,

**Corresponding Author:**
**ರಶ್ಮಿ ಎ. ಎಸ್**
ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ರಶ್ಮಿ ರಶ್ಮಿ ಎ. ಎಸ್.

# ಸಗರನಾಡಿನ ಆಡಳಿತ ವಿಭಾಗ

**ರಶ್ಮಿ ಎ.ಎಸ್. ಮತ್ತು ಡಾ. ಎಸ್.ಜಿ. ಚಲವಾದಿ**

ಕರ್ನಾಟಕದ ಪ್ರಾಚೀನ ಆಡಳಿತ ವಿಭಾಗಗಳ ಸೂಚನೆಗಳು ಶಾತವಾಹನರ ಕಾಲದಲ್ಲಿ ಬುಕ್ತಿ, ರಟ್ಟ ಎಂಬ ಹೆಸರಿನಲ್ಲಿ ಉತ್ತರ ಪದವಾಗಿ ಬಳಕೆಯಾಗಿವೆ. ಸಗರನಾಡಿನಲ್ಲಿ ದೊರೆತ ಇವರ ಕ್ರಿ.ಶ. 3ನೇ ಶತಕದ ವಜ್ಜಲ ಗ್ರಾಮ ಶಾಸನ 'ರಠನೀಯ' ಎಂದು ವಿಭಾಗದ ಕುರಿತು ಉಲ್ಲೇಖ ಮಾಡಿದೆ [1]. ಕದಂಬರ ಕಾಲದಲ್ಲಿ ವಿಷಯ, ಮಂಡಲ ರಾಷ್ಟ್ರ ಎಂಬ ಪದಗಳು, ಬಾದಾಮಿ ಚಾಲುಕ್ಯರ ಅವಧಿಯಲ್ಲಿ ವಿಷಯ, ಆಹಾರ,ಭೋಗ, ರಾಷ್ಟ್ರ ಪದಗಳು ಕಾಣಬರುತ್ತವೆ. ರಾಷ್ಟ್ರಕೂಟರ ಕಾಲದಲ್ಲಿ ನಾಡು, ಪಾಡಿ ಮಂಡಲ, ವಿಷಯ, ಜನಪದ,ಭೋಗ ಪದಗಳು ಬಳಕೆಗೊಂಡಿವೆ. ಕಲ್ಯಾಣ ಚಾಲುಕ್ಯ, ಕಲಚೂರಿಯಾದವರ ಕಾಲದಲ್ಲಿ ಒಮ್ಮೆಲೆ ರಾಜ್ಯ, ವೆಂದೆ, ವಳಿತ, ಚಾವಡತಿ, ಚೌದರೆ ಪದಗಳು ಕಾಣಿಸಿಕೊಳ್ಳುತ್ತವೆ.[2]
ತೀರ ಪ್ರಾಚೀನ ಕಾಲದ ಆಡಳಿತ ಉಪವಿಭಾಗಗಳು ಪ್ರಕೃತಿ ಸಂಬಂಧಿಗಳಾದ ನದಿ–ಬೆಟ್ಟಗಳಿಗೆ ಸೀಮಿತವಾಗಿದ್ದರೆ, ವೇದೊತ್ತರ ಕಾಲವು ಪುರಾಣ, ಸ್ಥಳ ಪುರಾಣಗಳಮೇಲಿಂದ ಮುನ್ನಲೆ ಬಂದಿತು. ಇದನ್ನು ಪುರಾಣ–ಮಹಾಕಾವ್ಯಗಳ ಕಾಲವೆಂತಲೂ ಕರೆಯಬಹುದಾಗಿದೆ. ಇದರ ಮುಂದಿನ ಕಾಲ ಪುರಾಣ ಸಂಬಂಧದ ಜೊತೆಗೆ ಪ್ರಾಚೀನ ಇತಿಹಾಸ ಆರಂಭ ಕಾಲವೆಂದು ವರ್ಗೀಕರಿಸಿ ಕೊಡಲಾಗುತ್ತದೆ. ಪುರಾಣ ಸಂಬಂಧ ಪಡೆದು ಪ್ರಾಚೀನ ಕಾಲಕ್ಕೆ ಬಂದಾಗ ಭಾರತವನ್ನು ಉತ್ತರಾಪಥ ಮತ್ತು ದಕ್ಷಿಣಾಪಥವೆಂಬ ಎರಡು ವಿಭಾಗದಲ್ಲಿ ನೋಡಲಾಗುತ್ತದೆ. ದಕ್ಷಿಣಾ ಪಥ ಸಂದರ್ಭದಲ್ಲಿ ವಿಂಧ್ಯ, ಶಿಷ್ಕಂದೆ, ಅಡಮ್ಯಾ, ಶಖರ, ಪುಲಿಂದ ಕುಂಡಲ ಹೆಸರುಗಳು ಮುಗ್ನತೆಗೆ ಬರುತ್ತದೆ.[3] ಇವುಗಳ ಬಲದಿಂದಲೇ ಪೌರಾಣಿಕ ಮತ್ತು ಚಾರಿತ್ರಿಕ ಭೂಗೋಲವನ್ನು ನೋಡಬೇಕಾಗುತ್ತದೆ. ಸಗರನಾಡು ಪುರಾಣ ಐತಿಹ್ಯ ಮತ್ತು ಚಾರಿತ್ರಿಕ ಭೂಗೋಲ ಎರಡನ್ನು ಹೊಂದಿದ್ದುಅವೆರಡರ ಬಲದಿಂದ ತನ್ನ ಚರಿತ್ರೆಯನ್ನು ರೂಪಿಸಿಕೊಂಡಿದೆ.

## ಅ) ಐತಿಹ್ಯ ಭೂಗೋಲ

ವೇದೊತ್ತರ ಕಾಲದ ಪುರಾಣ ಕಾವ್ಯಗಳ ಅವಧಿಯ ಕಥೆಗಳು ಕಾಲಕ್ರಮದಲ್ಲಿ ಪುರಾಣ ಸಂಬಂಧಿ ಕಥೆಗಳಾಗಿ ಮುನ್ನಡೆದವು. ಈ ಕಥೆಗಳು ಭೌಗೋಳಿಕ ಸ್ಥಳಗಳಿಗೂ ಅಂಟಿಕೊಂಡು ಬಂದಿದ್ದು ಚರಿತ್ರೆಯ ದುರಂತವೇ ಆಗಿದೆ. ಇಂತಹಪುರಾಣ ಸಂಬಂಧಿ ಐತಿಹ್ಯದ ಕಥೆಗಳು ಸಗರನಾಡಿಗೆ ಅಂಟಿಕೊಂಡಿದ್ದು ಸೋಜಿಗವಾದರೂ ಅದು ಸತ್ಯ. ಒಂದು ಪುರಾಣ ಕಥೆಯ ಪ್ರಕಾರ ಇಕ್ವಾಕು ವಂಶಕ್ಕೆ ಸಂಬಂಧಿಸಿದ 'ಸಗರ' ರಾಜನೆ ಸಗರನಾಡಿನ ಅರಸನೆಂದು, ಆದ್ದರಿಂದ ಈ ಪ್ರದೇಶಕ್ಕೆ 'ಸಗರನಾಡೆಂದು' ಹೆಸರು ಬಂದಿತ್ತೆಂದು ಹೇಳುತ್ತವೆ.[4] ಆದರೆ ಸಗರ ಚಕ್ರವರ್ತಿ ಮಹಾಭಾರತದ ಪೂರ್ವ ಕಥಾ ಸರಣಿಯಲ್ಲಿ ಬರುವ ಅರಸನಾಗಿದ್ದಾನೆ. ಅವನ ಕಥೆ ವಾಯುವ್ಯ ಭಾರತದ ಹಿಮಾಲಯಕ್ಕೆ ಮಾತ್ರ ಸಂಬಂಧ ಪಡುತ್ತದೆ. ಸಗರನು ಇಕ್ವಾಕು ಸಗರ ಪ್ರಸಿದ್ಧರಾಜ ಇದೇ ವಂಶದ ಹರಿಶ್ಚಂದ್ರ ಒಬ್ಬ ದೊರೆ. ಅವನ ಮಗ ರೋಹಿತಾಶ್ವ, ಮಗ ಹಾರಿತ, ಇವರ ವಂಶದಲ್ಲಿ ಕ್ರಮವಾಗಿ ಚುಂಚು, ಸುದೇವ, ಭರುಕ, ಬಾಹುತ ಮತ್ತು ಸಗರ ಮಹಾಭಾರತದ ಅರಣ್ಯ ಪರ್ವದಲ್ಲಿ ತೋಮಶರು, ಧರ್ಮರಾಯನಿಗೆ ಷೋಡಶ ಚಕ್ರವರ್ತಿಗಳ ಕಥೆಗಳನ್ನು ಹೇಳುವ ಸಂದರ್ಭದಲ್ಲಿ ಸಗರನ ಕಥೆಯು ಬಂದಿದೆ. ಮತ್ತು ಶಾಂತಿ ಪರ್ವದ 29ನೇ ಅಧ್ಯಾಯದಲ್ಲಿ ಸಗರ ಚಕ್ರವರ್ತಿಯು ಯಜ್ಞ–ಯಾಗಾದಿಗಳಲ್ಲಿ ಸಿದ್ಧ ಹಸ್ತನೆಂದು ಮಹಾದಾನಿಯೆಂದು ಶ್ರೀ ಕೃಷ್ಣನಿಂದ ಹೊಗಳಿಸಿಕೊಂಡಿದ್ದಾನೆ. ಇವನ ಕುರಿತು ಹಲವು ಕಥೆಗಳು ಮಹಾಭಾರತದ, ಜೈನ ಪುರಾಣಗಳಲ್ಲಿ ಬೇರೆ ಬೇರೆಯಾಗಿ ಬರುತ್ತದೆ.[5]

ಆದರೆ ಕಾಲಚಕ್ರ ಉರುಳಿದಂತೆ ಪುರಾಣೋಕ್ತ ಸಂಬಂಧದ ಕಥೆಗಳು ರಾಮಾಯಣ, ಮಹಾಭಾರತ ಮಹಾಕಾವ್ಯಗಳ ವ್ಯಕ್ತಿನಾಮಗಳು ಪ್ರಾದೇಶಿಕ ಭೂಗೋಳಕ್ಕೂ ಕಾಲಿರಿಸಿ ದಕ್ಷಿಣ ಭಾರತವಷ್ಟೇ ಅಲ್ಲದೆ, ಸಿಂಹಳದವರೆಗೆ ವ್ಯಾಪಿಸಿದ್ದು,ರಾಮಾಯಣದ ಶಿಷ್ಕಂದೆ, ರಾವಣನ ಲಂಕಾ, ರಾಮೇಶ್ವರದ ರಾಮಸೇತುವೆ, ಕೃಷ್ಣ ವೇಣ್ಣಾ ನದಿ, ಭೀಮಾರತಿ ನದಿಗಳು, ದಂಡಕಾರಣ್ಯಗಳು ಐತಿಹ್ಯ ಭೂಗೋಲಕ್ಕೆ ಸಂಬಂಧ ಕಲ್ಪಿಸಿಕೊಂಡಿವೆ. ಅರಲು–300, ಖಾಂಡವ ಮಂಡಲವೆಂದು ಪ್ರಖ್ಯಾತಿ ಪಡೆದಿದೆ. ಇಂತಹ ಪುರಾಣ ಸಂಬಂಧ ಐತಿಹ್ಯಗಳು ನಮ್ಮ ಜನಪದರಲ್ಲಿ ಸಾಕಷ್ಟು ಪ್ರಚಲಿತವಾಗಿ ಅವರ ನಂಬಿಕೆಯ ಪ್ರತೀಕಗಳಾಗಿ ಸ್ಥಳ, ನಾಡುಗಳು ಐತಿಹ್ಯಗಳ ಹೆಸರು ಪಡೆದು ಮುನ್ನಲೆಗೆ ಬಂದಿವೆ. ಆದರೆ ಚರಿತ್ರೆಯ ಪುಟಗಳಲ್ಲಿ ಐತಿಹ್ಯಗಳಿಗೆ ಮಹತ್ವವಿಲ್ಲ. ಆದಾಗ್ಯೂ ಕೆಲವು ಸಂದರ್ಭದಲ್ಲಿ ಅವುಗಳನ್ನು ಬಿಡಲಾಗದು. ಅವು ಜನರ ನಂಬಿಕೆಗೆ ಪಾತ್ರವಾಗಿ ಮಾನ್ಯತೆ ಪಡೆದಿವೆ. ಇದಕ್ಕೆ ಸಗರ, ಸಗರನಾಡು ಹೊರತಾಗಿಲ್ಲ.

**ಬ) ಚಾರಿತ್ರಿಕ ಭೂಗೋಲ**

ಐತಿಹ್ಯ ಭೂಗೋಳದಲ್ಲಿ ಪುರಾಣ ಕಾವ್ಯಗಳೇ ಮಹತ್ವ ಪಡೆದಿದ್ದರೆ, ಚಾರಿತ್ರಿಕ ಭೂಗೋಳದಲ್ಲಿ ದಾಖಲೆಗಳೇ ಪ್ರಮುಖವಾಗಿವೆ. ಹೀಗಾಗಿ ಸಗರನಾಡಿನ ಚಾರಿತ್ರಿಕ ಭೂಗೋಳದಲ್ಲಿ ಇಲ್ಲಿ ದೊರಕುವ ವಂಶಿಕ ಶಾಸನಗಳು ಪ್ರಮುಖ ಪಾತ್ರವಹಿಸುತ್ತವೆ. ಈ ಚಾರಿತ್ರಿಕ ಭೂಗೋಳದಲ್ಲಿ ಸಗರನಾಡು ಪ್ರಥಮಬಾರಿಗೆ ಎನ್ನುವಂತೆ ಕ್ರಿ.ಶ. 939ರ ಶಿರವಾಳ ಶಾಸನದಲ್ಲಿ ಕಾಣಿಸಿಕೊಳ್ಳುತ್ತದೆ. ರಾಷ್ಟ್ರಕೂಟ ಎರಡನೆ ಕೃಷ್ಣಾನ ಬಿರುದಾದ 'ಅಕಾಲ ವರ್ಷದೇವ' ಎಂದು ಆರಂಭಿಸಿ ಅವನ ಪಾದಪದ್ಮೋಪ ಜೀವಿ ಮಹಾಸಾಮಂತ ಚಂದಯ್ಯ "ಸಗರನಾಡ ನಾಳ್ಗಾವುಂಡ'ನಾಗಿ ಆಳುತ್ತಿದ್ದುದನ್ನು ಹೇಳುವುದು.[6] ಕ್ರಿ.ಶ. 939ರ ಹೊತ್ತಿಗೆ ಸಗರ ಒಂದು ನಾಡಾಗಿ ರೂಪಿತವಾಗಿರುವುದು ಇದರಿಂದ ಸ್ಪಷ್ಟವಾಗುವುದು. ಒಂದು ನಾಡಾಗಿ ರೂಪುಗೊಂಡ ನಂತರ ಅದರ ಹಿರಿಮೆಯನ್ನು ಕೆಲವು ಶಾಸನಗಳು ಸಾರುತ್ತವೆ. ಕ್ರಿ.ಶ. 12ನೇ ಶತಕದ ಮದ್ದರಕಿ ಶಾಸನ ನಾಡ ಗಾವುಂಡ ಮಾಡಿಸಿದ ಅಲ್ಲಿಯ ಧರ್ಮೇತ ಭಾವಿಯನ್ನು ಸಗರದ ಧರ್ಮೋತ (ಹೊಂಡ) ಬಾವಿಗೆ ಹೋಲಿಕೆ ಮಾಡುತ್ತಾ ಹೀಗೆ ವರ್ಣಿಸಿದೆ.

"ಸಗರ ಧರ್ಮ್ಮೇತು ನಗರದ ತಾಂ
ರೇತಿ ಪುಣ್ಡರೇಂಕನದ್ಮೇನ ಮನಮತ್ನ
ಮಾರಒನು ನಿಧಿನ ಪಾಳಸ ರಾಜ
ನಿಜದಣ್ಡನಳೋರಿ ಬರದಡೆಂದಸು ಹ
ರೋಜ್ವಳಡಿ ವ್ಯಾರದೆ ಪುಮೊಂಕರಂ ಬಗೆ
ಏಳೆ ಮರ್ದ್ದಿರುಂಕೆಯ ಸರೋವರ ಮಾ
ಳದೆ ಧರಿತ್ರಿಯೊಳ"॥

ಎಂದು ಮಳ್ದಿರುಕೆ (ಮದ್ದರಕಿ)ಯ ಧರ್ಮ್ಮೇತದ ಬಾವಿ ಸರೋವರದಂತಿದ್ದು ಅದು ಸಗರ ಧರ್ಮ್ಮೋವಕ್ಕೆ ಸಮವಾಗಿತ್ತೆಂದು ಹೇಳುವಲ್ಲಿ ಸಗರನಗರವನ್ನು ಹೆಸರಿಸುತ್ತದೆ.[7]

ಕ್ರಿ.ಶ. 1116ರ ಕೊಂಡಗೂಳಿ (ಜೇ–ತಾ) ಶಾಸನ ಸಗರವನ್ನು ಉಲ್ಲೇಖಿಸುತ್ತಾ "ಸುರಗಿರಿ ಮೇರುಪರ್ಬ್ಬತ ಮನಣ್ಡಲೆಗುಂ ನಿಜದುನ್ನತಿಕೆಯಿಂ" ಎಂದು ಬಣ್ಣಿಸಿದೆ. ಸಗರ ಗಿರಿ ಮೆರು ಪರ್ವ್ವತದ ಮಂಡಲವಾಗಿತ್ತೆಂದು ಹೇಳುವಲ್ಲಿ ಅದರ ವಿಸ್ತಾರವನ್ನು ಸ್ಪಷ್ಟಪಡಿಸುತ್ತದೆ.[8] ಕ್ರಿ.ಶ. 1239ರ ಯಾದವ ಸಿಂಘಣನ ಬಿಜಾಪುರ (ಸೂ–ತಾ) ಶಾಸನವು "ಮೂಡಣ ನಿರ್ಮ್ಮಳ ಧರ್ಮಾಂಬುಧಿ ಮಹಾಪಟ್ಟಣಂ ಸಗರದ ಹೆಬ್ಬಟ್ಟೆಗಾರ ಧರ್ಮಶ್ರೇಣಿ ಎಂಟು ಗೌಡ ಮೂರಪದ ಮುಖ್ಯಮು ನಾಡನಾ ಸಾಸಿರದ ಅಶೇಷ ಸಮಯಂಗಳು ತಂಮೊಳೇಕಸ್ಥರಾಗಿರ್ದ್ದು" ಎನ್ನುವಲ್ಲಿ ಸಹ ಸಗರಪಟ್ಟಣದ ವಿಶಾಲತೆಯನ್ನು ತೋರಿಸುತ್ತದೆ.[9] ಹೀಗೆ ಚಾರಿತ್ರಿಕ ಭೂಗೋಳದಲ್ಲಿ ನಾಡು, ಮಂಡಲವೆಂದು ಕರೆಯಿಸಿಕೊಳ್ಳುವ ಸಗರನಾಡು ಹಲವು ವೈಚಿತ್ರ್ಯಗಳನ್ನು ತನ್ನಲ್ಲಿ ಅಡಗಿಸಿಕೊಂಡಿದೆ.

**ಕ) ಸಗರ–300**

ಮಹಾಕಾವ್ಯಗಳು, ಪುರಾಣ, ಐತಿಹ್ಯ ಭೂಗೋಳ ಹಾಗೂ ಚಾರಿತ್ರಿಕ ಭೂಗೋಳಗಳಲ್ಲಿ ಉಲ್ಲೇಖಗೊಂಡು ಕ್ರಿ.ಶ. 1337ರ ವರೆಗೆ ನಾಡು, ಮಂಡಲವಾಗಿ ಹೊರಹೊಮ್ಮಿದ ಸಗರ–ಸಗರನಾಡು ಕಾಲ ಕಾಲಕ್ಕೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡ ಬಗೆಯನ್ನು ಶಾಸನಗಳು ವಿವರಿಸುತ್ತವೆ.

'ಸಗರ' ಒಂದು ಪರಿಪೂರ್ಣ ಆಡಳಿತ ವಿಭಾಗವಾಗಿ ಮಾರ್ಪಡುವ ಮುಂಚೆ ನಾಡಾಗಿ ಪರಿವರ್ತನೆಗೊಂಡ ಕುರಿತು ಕ್ರಿ.ಶ. 939ರ ಶಿರವಾಳ ಶಾಸನ ಮೊದಲ ಬಾರಿಗೆ ಹೊರಗೆಡುದಿದೆ.[10] ನಂತರ ತಿಂಥಣಿ ಕ್ರಿ.ಶ. 1017ರ ತಾಮ್ರ ಪಟದ ಕಾಲಕ್ಕೆ ಮೂನ್ನೂರು ಗ್ರಾಮಗಳನ್ನು ಹೊಂದಿದ ನಾಡಾಗಿ ಪರಿವರ್ತನೆ ಗೊಂಡಿತ್ತು. ಈ ಶಾಸನ "ಎಡದೊರೆ ವಿಷಯದ ಪ್ರತಿಬದ್ಧ ಸಗರ ತ್ರಿಶತ ಮಧ್ಯರ್ತ್ತಿನಿ ಕೃಷ್ಣವೇಣ್ಣಾನದ್ಯುತ್ತರ ತೀರೋಪಾಶ್ರತೇ ತಿನ್ತಿಣಿ ಸಿರಿವರ ನಾಮನಿಮ "ಎನ್ನುವಲ್ಲಿ ಎಡದೊರೆ ವಿಷಯದ (ನಾಡು) ಪ್ರತಿಬದ್ಧ ಕೃಷ್ಣ ನದಿಯ ಉತ್ತರಕ್ಕೆ ಹತ್ತಿಕೊಂಡು ಸಗರ–300 ಇದ್ದು ಅದರಲ್ಲಿ ನದಿ ತೀರದಲ್ಲಿ ಈ ತಿಂಥಣಿ ಗ್ರಾಮವಿತ್ತೆಂದು ಹೇಳುವುದು.[11] ತದನಂತರದ ಕ್ರಿ.ಶ. 1051ರ ಭೀಮರಾಯನಗುಡಿ ಶಾಸನ [12] ಕ್ರಿ.ಶ. 1054ರ ಕೆಂಬಾವಿ ಶಾಸನ [13] ಕ್ರಿ.ಶ. 1076ರ ಸಂಗಮ ಶಾಸನ [14] ಕ್ರಿ.ಶ. 1077ರ ಏವೂರ ಶಾಸನ [15], ಕ್ರಿ.ಶ. 1085ರ ಹಾವಿನಾಳ ಶಾಸನ [16] ಗಳು ಸಗರ ಮುನ್ನೂರು ಬಾಡು ಗ್ರಾಮಗಳನ್ನು ಹೊಂದಿದ ಆಡಳಿತ ವಿಭಾಗತ್ತೆಂದು ವಿವರಿಸುತ್ತವೆ.

**ಡ) ಸಗರ–500**

ಕ್ರಿ.ಶ. 1017 ರಿಂದ ಕ್ರಿ.ಶ. 1085ರ ವರೆಗೆ ಮುನ್ನೂರು ಗ್ರಾಮಗಳನ್ನು ಹೊಂದಿದ ನಾಡಾಗಿದ್ದ ಸಗರನಾಡು, ಕ್ರಿ.ಶ. 1076 ರಿಂದಲೇ ಸಗರ–500 ಗ್ರಾಮಗಳ ನಾಡಾಗಿ ಪರಿವರ್ತನೆ ಹೊಂದುತ್ತಿರುವುದನ್ನು ಅದೇ ಸಂಗಮ ಶಾಸನ ತಿಳಿಸುವುದು. ಇದರ ವಿಸ್ತಾರವನ್ನು ಸಂಗಮ (1076), ಏವೂರ (1105), ಏವೂರ (1108), ಮೂದನೂರ (1129), ಶಿರವಾಳ (1137), ಏವೂರ (1139), ಸಂಗಮ (1143), ಮಲ್ಲಾಬಾದ (1148),ಯಡ್ರಾಮಿ (1169), ಹೊತಪೇಟ್ (1175), ಶಾಸನಗಳು ಉಲ್ಲೇಖ ಮಾಡುವವು. [17] ಬಿಜಾಸಪುರ (ಸೂ.ತಾ)ದ ಯಾದವ 2ನೇ ಸಿಂಘಣ 1239ರ ಶಾಸನದ ಹೊತ್ತಿಗೆ ಸಗರನಾಡಿನ ಪಟ್ಟಣ ಸಗರ ಮಹಾ ಪಟ್ಟಣವಾಗಿ ಸ್ಥಾನ ಪಡೆದಿರುವುದನ್ನು ಹೇಳುವಲ್ಲಿ ಸಗರನಾಡಿನ ರಾಜಧಾನಿ ಪಟ್ಟಣ ಸಗರ (ಇಂದಿನ ಶಹಪುರ) ಆಗಿರುವುದನ್ನು ಸ್ಪಷ್ಟಪಡಿಸುತ್ತದೆ [18]. ಇದನ್ನು ಪುಷ್ಠಿ ಕರಿಸುವಂತೆ ಈ ಮೊದಲೆ ಕ್ರಿ.ಶ. 1116ರ ಕೊಂಡಗೂಳಿ ಶಾಸನ "ಸುರಗಿರಿ ಮೇರು ಪರ್ಬ್ಬತ ಮನಣ್ಡತೆಗುಂ" ಎಂದು ಸಗರನಾಡು ಗಿರಿ ಎತ್ತರದ ಪರ್ವತ), ಮೇರುಪರ್ವ್ವತದ ಮಂಡಲವಾಗಿತ್ತೆಂದು

ಹೇಳುವಲ್ಲಿ ಸಗರ ನಾಡಿನ ಭೌಗೋಳಿಕ ಪರಿಸರದ ಪರಿಚಯ ಮಾಡಿಕೊಡುತ್ತದೆಯಲ್ಲದೆ ಅಅದರ ರಾಜಧಾನಿ ಎಲ್ಲಿತ್ತೆಂಬುದರ ಮುನ್ಸೂಚನೆ ನೀಡುತ್ತದೆ [19].

**ಆಡಳಿತ ವಿಭಾಗದ ವ್ಯಾಪ್ತಿ**

ಮೇಲಿನ ಶಾಸನ ಉಲ್ಲೇಖಗಳನ್ನು ಗಮನಿಸಿದಾಗ ಸಗರ ನಾಡಿನ ವ್ಯಾಪ್ತಿ ಮೊದಲು ನಾಡಾಗಿ, ನಂತರ 300 ಗ್ರಾಮಗಳ ನಾಡಾಗಿ, ನಂತರ 500 ಗ್ರಾಮಗಳನ್ನು ಹೊಂದಿದ ನಾಡಾಗಿ ವಿಶಾಲ ವ್ಯಾಪ್ತಿ ಹೊಂದಿತು. ಶಾಸನಗಳು ಸಗರನಾಡಿನ ವ್ಯಾಪ್ತಿಗೊಳಪಟ್ಟ ಗ್ರಾಮಗಳನ್ನು ಪ್ರದೇಶವನ್ನು ಸ್ಪಷ್ಟವಾಗಿ, ಸರಳ-ಸುಂದರವಾಗಿ ವಿಷದೀಕರಿಸುತ್ತವೆ.

ಪ್ರಥಮ ಬಾರಿಗೆ ಕ್ರಿ.ಶ. 939ರ ಶಿರವಾಳ ಶಾಸನವು ಸಗರ ನಾಡಿನ ಕುರಿತು ಹೇಳೂತ್ತಾ ಅದರ ಮೇರೆಯನ್ನು ಗುರುತಿಸುವಲ್ಲಿ ಮೊದಲ ಹೆಜ್ಜೆಯಾಗಿಕಾಣಿಸಿಕೊಳ್ಳುತ್ತದೆ. ಭೀಮಾನದಿಯ ಬಲದಂಡೆಯ ಮೇಲಿನ ಶಿರವಾಳ ಸಗರ-300 ನಾಡಿನ ಉತ್ತರ ಗಡಿ ಗ್ರಾಮವಾಗಿಗುರುತಿಸಿದರೆ, ಕ್ರಿ.ಶ. 1017ರ ತಿಂಥಣಿಯ ತಾಮ್ರಪಟ ಶಾಸನ ಸಗರ ನಾಡಿನ ದಕ್ಷಿಣ ಗಡಿಯಾಗಿ ಕೃಷ್ಣಾ ನದಿಯನ್ನು ಗುರುತಿಸುತ್ತದೆ. ಕ್ರಿ.ಶ. 1054ರ ಕೆಂಬಾವಿ ಶಾಸನ ಸಗರ-300ರ ಬಳಿಯ ನಗವೂರ (ನಗನೂರ) ಗ್ರಾಮವನ್ನು ಹೆಸರಿಸಿದೆ. ಅದರ ಪಶ್ಚಿಮ ಗಡಿಯ ವಿಸ್ತರಣೆಯನ್ನು ಗುರುತಿಸುತ್ತದೆ. ಅದನ್ನು ಸಮರ್ಥಿಸುವಂತೆ ಕ್ರಿ.ಶ. 1096ರ ಕರಡಕಲ್ಲ ಶಾಸನ ಹಗರಟಗೆ 300ರ ಬಳಿಯ ಕಂಬಿನ ಕರಡಿಕಲ್ಲು ಎಂದು ಹೇಳುವಲ್ಲಿ ನಗನೂರ ಮತ್ತು ಕರಡಕಲ್ಲಗಳು ಎರಡು ನಾಡಿನ ಗಡಿ ಭಾಗದ ರೇಖೆಯನ್ನು ಗುರುತಿಸಿ ಸ್ಪಷ್ಟಪಡಿಸುತ್ತವೆ.

ಕ್ರಿ.ಶ. 1077ರ ಏವೂರ ಶಾಸನ ನರಿಯಂಬೊಳ-70ರ ಬಳಿಯ ಕಿರಿಯ ಚಳಂಬಟ್ಟೆ (ಬಳಬುಟ್ಟಿ)ಯನ್ನು ಹಾಗೂ ಸಗರ-300ರ ಬಳಿಯ ಪಿರಿಯ ಬೆಳಂಬಟ್ಟೆ (ಬಳಬಟ್ಟೆ) ಗ್ರಾಮಗಳು ಎರಡರ ಮಧ್ಯದ ಗಡಿ ಗಡಿ ಗ್ರಾಮಗಳಾಗಿದ್ದವೆಂಬುದನ್ನು ಸ್ಪಷ್ಟಪಡಿಸುತ್ತಿದೆ. ಬಳಬಟ್ಟೆ (ದೊಡ್ಡ) ಗ್ರಾಮ ಸಗರ ನಾಡಿನ ಪಶ್ಚಿಮ-ವಾಯುವ್ಯ ಗಡಿರೇಖೆಯ ಕೊನೆಯ ಗ್ರಾಮವಾಗಿ ಬರುತ್ತದೆ. ಕ್ರಿ.ಶ. 1076 ಸಂಗಮ ಶಾಸನ ಸಗರ-300ರ ಬಳಿಯ ಕೊಬಾಳ ಗ್ರಾಮ ಎನ್ನುವಲ್ಲಿ ಅದರ ಪೂರ್ವ ಗಡಿ ಹಾಗೂ ಕೃಷ್ಣಾ ಭೀಮಾ ನದಿಗಳು ಸೇರುವ ಸಂಗಮವೇ ನಾಡಿನ ಪೂರ್ವಗಡಿ ರೇಖೆ ಆಗಿರುವುದನ್ನು ತಿಳಿಸುತ್ತದೆ.

ಹೀಗೆ ಪೂರ್ವದಲ್ಲಿ ಕೃಷ್ಣಾ-ಭೀಮಾನದಿ ಸೇರುವ ಸಂಗಮ ಕ್ಷೇತ್ರ ಹಾಗೂ ಕೊಬಾಳು ಗ್ರಾಮಗಳು ಇದರ ಪೂರ್ವ ಗಡಿಯಾದರೆ, ತಿಂಥಣಿ-ಕೃಷ್ಣಾನದಿ ದಕ್ಷಿಣ ಗಡಿ ಮೇರೆಯಾಗಿವೆ. ಶಿರವಾಳ ಭೀಮಾನದಿಗಳ ಇದರ ಉತ್ತರ ಗಡಿ ಮೇರೆಯಾದರೆ ಪಿರಿಯ ಬಳಬಟ್ಟೆ ಗ್ರಾಮ ಹಾಗೂ ಅದರ ಹತ್ತಿರದಲ್ಲಿರುವ ಏವೂರ ಗ್ರಾಮ ನಗನೂರ ಗ್ರಾಮಗಳು ಪಶ್ಚಿಮ ಗಡಿ ಮೇರೆಯಾಗಿ ಕಾಣಿಸಿಕೊಳ್ಳುತ್ತವೆ.

ಸಗರ-500 ನಾಡಿನ ವ್ಯಾಪ್ತಿಯನ್ನು ಕ್ರಿ.ಶ. 1076ರ ಸಂಗಮ ಶಾಸನ, 1108ರ ಏವೂರ ಶಾಸನ, 1129ರ ಮೂದನೂರ ಶಾಸನ, 1139ರ ಶಿರವಾಳ ಶಾಸನ, 1139ರ ಏವೂರ ಶಾಸನ, 1193ರ ಸಂಗಮ ಶಾಸನ 1148ರ ಮಲ್ಲಾಬಾದ ಶಾಸನ, 1169ರ ಯಡ್ರಾಮಿ ಶಾಸನ, 1175ರ ಹೊತಪೇಟ್ ಶಾಸನ ಕಲಚುರಿಗಳ ಮರಮಕಲ್ಲ ಶಾಸನಗಳು ತಿಳಿಸುವವು. ಇವಲ್ಲದೆ ಕ್ರಿ.ಶ. 1200, 1206ರ ಎಡೆಯೂಪುರ ಶಾಸನಗಳು, 1265ರ ಯಾಳಗಿ ಶಾಸನ, 12ನೆ ಶತಕದ ಮೂದನೂರ ಶಾಸನಗಳು ಸಗರ-500ರ ವ್ಯಾಪ್ತಿಯನ್ನು ತಿಳಿಸುವವು. ಈ ಶಾಸನಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಈ ಹೊತ್ತಿಗೆ ಯಡ್ರಾಮಿಯು ಏಳರಾಮೆ-50 ವಿಭಾಗವಾಗಿ, ಕೆಂಬಾವಿ ಕೆಂಬಾವಿ-12 ಮತ್ತು 24 ಗ್ರಾಮದ ಮೇಲೆ ಆಡಳಿತ ವಿಭಾಗಗಳಾಗಿ ಹೊರಹೊಮ್ಮಿ ಅವು ಸಗರ-500 ವಿಭಾಗಕ್ಕೆ ಸೇರಿಕೊಂಡಿದ್ದವೆಂಬುದನ್ನು ಸ್ಪಷ್ಟಪಡಿಸುತ್ತವೆ. ಈ ವಿಭಾಗಗಳ ಗ್ರಾಮಗಳು ಮೊದಲು ಹಗರಟಗೆ-300 ನಾಡಿಗೆ ಹಾಗೂ ಅಂಕುಲಗಿ-50, ನರಿಯಾಂಬೊಳ-70ಕ್ಕೆ ಸೇರಿದ ಕೆಲವು ಗ್ರಾಮಗಳಾಗಿದ್ದವು. ಈ ಗ್ರಾಮಗಳು ಸಗರನಾಡಿಗೆ ಸೇರಿದ ಮೇಲೆ ಸಗರನಾಡು 500 ಗ್ರಾಮಗಳನಾಡಾಗಿ ತನ್ನ ವ್ಯಾಪ್ತಿಯನ್ನು 300 ರಿಂದ 500 ಗ್ರಾಮಗಳಿಗೆ ಹೆಚ್ಚಿಸಿಕೊಂಡಿತು. ಅಂದರೆ, ಅಂಕುಲಗೆ-50ನ್ನು ಹೊರತುಪಡಿಸಿ, ನರಿಯಂಬೊಳ-70 ವಿಭಾಗ, ಏಳರಾಮೆ-50, ಕೆಂಬಾವಿ-24 ವಿಭಾಗಗಳನ್ನು ಸೇರಿಸಿಕೊಂಡು ಸಗರ-500 ಬಾಗ(ಗ್ರಾಮ)ಗಳ ದೊಡ್ಡದಾದ ಆಡಳಿತ ವಿಭಾಗವಾಗಿ ಕುಂತಳನಾಡು-ಕುಂತಳದೇಶದ ಭಾಗವಾಗಿ ತನ್ನ ಕರ್ತವ್ಯ ನಿರ್ವಹಿಸಿದ್ದು ಕಂಡುಬರುತ್ತದೆ.

ಮೇಲಿನ ಶಾಸನಗಳನ್ನೆ ಮುಂದಿಟ್ಟುಕೊಂಡು ಸಗರನಾಡಿನ ವ್ಯಾಪ್ತಿ ಅದು ಹೊಂದಿದ್ದ ಗ್ರಾಮಗಳನ್ನು ನೋಡುವುದಾದರೆ ಇಂದಿನ ಕಲಬುರ್ಗಿ ಹಾಗೂ ಯಾದಗಿರಿ ಜಿಲ್ಲೆಯ ತಾಲೂಕುಗಳಾದ ಜೇವರ್ಗಿ, ಶಹಪೂರ, ಸೂರಪೂರ ತಾಲೂಕಿನ ಗ್ರಾಮಗಳು ಇದರಲ್ಲಿ ಸಮಾವೇಶಗೊಳ್ಳುತ್ತವೆ. ಅಂದರೆ ಕಲಬುರ್ಗಿ ಜಿಲ್ಲೆ ಜೇವರ್ಗಿ ತಾಲೂಕು 158 ಗ್ರಾಮಗಳನ್ನು ಹೊಂದಿದ್ದು, ಅದರಲ್ಲಿ 45 ಗ್ರಾಮಗಳು, ಯಾದಗಿರಿ ಜಿಲ್ಲೆ ಶಹಪುರ ತಾಲೂಕಿನ 154 ರಲ್ಲಿ ಎಲ್ಲಾ ಗ್ರಾಮಗಳು ಮತ್ತು ಸೂರಪುರ ತಾಲೂಕಿನ 186 ಗ್ರಾಮಗಳ ಪೈಕಿ 101 ಗ್ರಾಮಗಳು ಸೇರಿ ಮೊದಲಿನ ಸಗರ-300 ನಾಡು ರೂಪಿತಗೊಂಡಿತ್ತು. ನಂತರ ಜೇವರ್ಗಿ ತಾಲೂಕಿನಲ್ಲಿ ಬರುವ ನರಿಯೆಂಬೊಳ-70 ಸುರಪುರ ತಾಲೂಕಿನಲ್ಲಿ ಬರುವುದು. ಕೆಂಬಾವಿ-24, ಜೇವರ್ಗಿ ತಾಲೂಕಿನಲ್ಲಿ ಬರುವ ಏಳರಾಮೆ-50 ಸೇರಿ ಒಟ್ಟು 144ಗಳು ಹಾಗೂ ಹಗರಟಗೆ-300 ನಾಡಿಗೆ ಸೇರಿದ ಕೊಂಡಗೂಳಿ, ಮಾಣಗೇರಿ, ಕಾಣಮೇಶ್ವರ ಅಲ್ಲಾಪುರ ಸಿಂದಗಿ ತಾಲೂಕಿನ ಗೊಲಗೋರಿ, ವಂದಲ, ಹೊನ್ನಾಳಿ, ಅನಂತಪುರದಿಂದ ಕುಳಗೇರಿ, ಯಾಳಗಿಯವರೆಗೆ ಬರುವ 60ಕ್ಕಿಂತ ಹೆಚ್ಚಿನ ಗ್ರಾಮಗಳು ಸೇರಿ ಸಗರ-500 ನಾಡು ರೂಪಿತವಾಗುತ್ತದೆ [20]. ಅಂದರೆ ಸಗರನಾಡಿನ ಪಶ್ಚಿಮ ಗಡಿ, ಹಾಗೂ ಉತ್ತರ ಗಡಿಗಳು ಹಿಗ್ಗುತ್ತಾ ಹೋಗಿದೆ. ನರಿಯೆಂಬೊಳ-70 ಸಗರನಾಡಿನಲ್ಲಿ ಸಂಪೂರ್ಣ ಕೂಡಿಕೊಂಡಿರೆ, ಹಗರಟ್ಟಿಗೆ ನಾಡಿನ ನೂರಾರು ಗ್ರಾಮಗಳು ಸಗರನಾಡಿಗೆ ಬಂದು ಸೇರುತ್ತವೆ. ಹೀಗೆ ಸಗರನಾಡು ಶಾಸನಗಳ ಹಿನ್ನೆಲೆಯಲ್ಲಿಯೇ-300 ಗ್ರಾಮಗಳಿಂದ 500 ಗ್ರಾಮಗಳ ನಾಡಾಗಿ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಂಡಿರುವುದು ಸಾಮಾನ್ಯ ಲಕ್ಷಣವಾಗಿ ಕಂಡುಬರುವುದು.

**ಉಲ್ಲೇಖಗಳು**


1. ಹನುಮಾಕ್ಷಿ ಗೋಗಿ, ಕಲಬುರ್ಗಿ ಜಿಲ್ಲೆಯ ಶಾಸನಗಳು, ವಜ್ಜಲ, ಸಂ. 6 (ಪುಟ-543).
2. ಎಂ.ಎಂ.ಕಲಬುರ್ಗಿ (ಸಂ), ಭಾಗ-8, ಪ್ರಸ್ತಾವನೆ ಪುಟ-7.
3. ಅದೇ ಪುಟ-6.
4. ಶಿವಾನಂದ ನಿ, ಸಗರನಾಡಿನ ಶಿವಶರಣರು (1972), ಪಿ.ಎಚ್.ಡಿ ಮಹಾಪ್ರಬಂಧ, ಕ.ವಿ.ವಿ. ಧಾರವಾಡ, ಪುಟ-1.
5. ವೀರಭದ್ರ, ಸಿ.ಪಿ. ಕಲಬುರ್ಗಿ ಜಿಲ್ಲಾ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆ, (ಕಲಬುರ್ಗಿ ಜಿಲ್ಲೆ) ಕನ್ನಡ ಸಾಹಿತ್ಯ ಸಂಪುಟ (2011) ಪುಟ-3.
6. ಅ.ರಾ.ಮಿತ್ರ, ಮಹಾಭಾರತದ ಪಾತ್ರ ಸಂಗತಿಗಳು, ಪುಟಗಳು 323-4.

7. ಹ.ಗೊ, ಕ.ಜಿ.ಶಾ, ಶಿರವಾಳ, ನಂ. 30.
8. ಅದೇ, ಮದ್ದರಕಿ ನಂ. 21
9. ಅದೇ ಕೊಂಡಗೂಡಿ, ನಂ. 45.
10. ಅದೇ, ಸೂ.ತಾ.ಶಾ, ವಿಜಾಪೂರ, ನಂ. 45.
11. ಅದೇ, ಕ.ಜಿ.ಶಾ, ಶಿರವಾಳ, ನಂ. 30.
12. ಅದೇ, ಸೂ.ತಾ.ಶಾ, ತಿಂಥಣಿ, ನಂ. 37.
13. ಅದೇ, ಕ.ಜಿ.ಶಾ, ಭೀಮರಾಯನ ಗುಡಿ, ನಂ. 17.
14. ಅದೇ ಸೂ.ತಾ.ಶಾ, ಕೆಂಬಾವಿ, ನಂ. 31.
15. ಅದೇ ಕ.ಜಿ.ಶಾ. ಸಂಗಮ, ನಂ. 35.
16. ಅದೇ ಸೂ.ತಾ.ಶಾ, ಏವೂರ, ನಂ. 8
17. ಅದೇ ಹಾವಿನಾಳ, ನಂ. 92.
18. ವಿವರಕ್ಕಾಗಿ ನೋಡಿ ಹನುಮಾಕ್ಷಿ ಗೋಗಿ ಇವರ ಕಲಬುರ್ಗಿ ಜಿಲ್ಲೆಯ ಶಾಸನಗಳು ಮತ್ತು ಸೂರವು ತಾಲೂಕಿನ ಶಾಸನಗಳು.
19. ಅದೇ ಸೂ.ತಾ.ಶಾ. ಬಿಜಾಪುರ, ನಂ. 45.
20. ಅದೇ. ಕ.ಜಿ.ಶಾ, ಕೊಂಡಗೂಳಿ, ನಂ. 45.